ದಿಃ 11-05-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ.ಕೆ. ವಕೀಲರಿಂದ ಎದುರುದಾರರ ಪರವಾಗಿಃ**

Extra ಕೆಲಸ ಮಾಡಿದ್ದಲ್ಲಿ ಮಾತ್ರ OT Payment ಆಗುತ್ತದೆ ಅಂದರೆ ನಿಜ. Extra ಅವಧಿ ಕೆಲಸ ಮಾಡಿದ ಬಗ್ಗೆ ನಾನು ದಾಖಲೆಯನ್ನು ಹಾಜರುಪಡಿಸಿಲ್ಲ. ಸಾಕ್ಷಿದಾರರು ಹೇಳುತ್ತಾರೆ Supervisor Attendance ಕೊಟ್ಟಿರುತ್ತಾರೆ ಅದೇ Extra ಅವಧಿ ಇರುತ್ತದೆ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ Extra ಅವಧಿ ನಮೂದು ಇದೆ. ಸಂಬಳದಲ್ಲಿ ನನಗೆ ಕಡಿಮೆಯಾದ ವಿಷಯವನ್ನು ನಾನು ನಮೂದು ಮಾಡಿದ್ದೇನೆ. ತಿಂಗಳಿಗೆ ನಾನು ಎಷ್ಟು ದಿನ ಕೆಲಸ ಮಾಡುತ್ತಿದ್ದೆ ಅಷ್ಟು ದಿನದ ಸಂಬಳ ಕೊಡುತ್ತಿದ್ದರು ಅಂದರೆ ನಿಜ. ಸಾಕ್ಷಿದಾರರು ಹೇಳುತ್ತಾರೆ OT ಕೆಲಸದ ಬಗ್ಗೆ Payment ಆಗಿಲ್ಲ. Festival Advance ಕೊಡುತ್ತಿದ್ದರಾ ಅಂದರೆ ಕೊಟ್ಟಿಲ್ಲ. Festival Advance ನ್ನು ಹಂತ ಹಂತದಲ್ಲಿ ಸಂಬಳದಲ್ಲಿ ಕಟ್ ಮಾಡಿ ಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ನಿಪಿ-12 ರಿಂದ 14 ದಾಖಲೆಗಳು ಎದುರುದಾರರು ನನಗೆ ಕೊಟ್ಟಿರುತ್ತಾರೆ. Labour court ನಲ್ಲಿ ನಾನು ಕೇಸ್ ಹಾಕುವ ಪೂರ್ವದಲ್ಲಿ ಆ ದಾಖಲೆಗಳನ್ನು ನನಗೆ ಎದುರುದಾರರು ಕೊಟ್ಟರು. ಅವುಗಳಲ್ಲಿ ಎದುರುದಾರರ ಸಹಿ ಮತ್ತು ಸೀಲ್ ಇಲ್ಲ. ಸಾಕ್ಷಿದಾರರು ಹೇಳುತ್ತಾರೆ ಕೊನೆಯ ಪುಟದಲ್ಲಿ 22 ಪಾರ್ಮನಲ್ಲಿ ಅವರ ಸಹಿ ಇರುತ್ತದೆ. ನಿಪಿ-12 ರಿಂದ 14 ರ ದಾಖಲೆಗಳಲ್ಲಿ Self attested ಅಂತ ಬರೆದಿದ್ದೇನೆ, ಅದರ ಮೂಲ ದಾಖಲೆಗಳು ನನ್ನ ಹತ್ತಿರ ಇಲ್ಲ. ಎದುರುದಾರರು ನಿಪಿ-12 ರಿಂದ 14 ರ ದಾಖಲೆಗಳನ್ನು ನನಗೆ ಕೊಟ್ಟಿಲ್ಲ ಅಂದರೆ ಸರಿಯಲ್ಲ. ಕಛೇರಿಯಲ್ಲಿ ಕೆಲಸ ಮಾಡುತ್ತಿರಬೇಕಾದರೆ ಈ ಮೂರು ದಾಖಲೆಗಳನ್ನು ಕದ್ದು ತೆಗೆದುಕೊಂಡು ಬಂದಿದ್ದೇನೆ ಅಂದರೆ ಸರಿಯಲ್ಲ. ಅಂತಹ ದಾಖಲೆಗಳಿಗೆ ನಾನು Self attested ಅಂತ ಮಾಡಿಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ಆ ದಾಖಲೆಗಳಿಗೆ ಸಹಿ ಮಾಡಿದರೆ ಮಾತ್ರ ತೆಗೆದುಕೊಳ್ಳುತ್ತೇನೆ ಅಂತ ಎದುರುದಾರರಿಗೆ ಹೇಳಿದ್ದೆ.

ನಿಪಿ-10 ಮತ್ತು 11ರ ದಾಖಲೆಗಳು ನನಗೆ ತಲುಪಿದೆ. ನಿಪಿ-10ರ ದಾಖಲೆಯು ಎದುರುದಾರರು ನನಗೆ ಕೊಡಲು ಬಂದಾಗ ನಾನು ನಿರಾಕರಿಸಿದ್ದೇನೆ ಆದ್ದರಿಂದ ಅವರು RPAD ಮೂಲಕ ಕಳುಹಿಸಿದ್ದಾರೆ ಅಂದರೆ ಸಾಕ್ಷಿದಾರರು ಹೇಳುತ್ತಾರೆ ನನಗೆ ಕೇವಲ letter head ಮಾತ್ರ ಕೊಡುತ್ತಿದ್ದರು. ನಿಪಿ-10ಕ್ಕೆ ನಾನು ಕಂಪನಿಗೆ ಉತ್ತರ ಕೊಟ್ಟಿದ್ದೇನೆ. ನಿಪಿ-11ರ ದಾಖಲೆ ನನಗೆ ಗೊತ್ತಿದೆ. ಅದು Post ಮೂಲಕ ನನಗೆ ಬಂದಿದೆ. ನಿಪಿ-10 ಮತ್ತು 11ಕ್ಕೆ ಒಂದು ತಿಂಗಳು ಒಂದು ವಾರ ವ್ಯತ್ಯಾಸ ಇದೆ ಅಂದರೆ ನಿಜ. ಮೂರು ಸಲ ನಾನು ಫ್ಯಾಕ್ಟರಿಗೆ ಹೋಗಿದ್ದೆ ಆದರೆ ನನಗೆ ಒಳಗೆ ಕರೆಸಿಲ್ಲ. ಈ ಎರಡು ಪತ್ರಕ್ಕೆ ನಾನು ಲಿಖಿತವಾದ ಉತ್ತರ ಕೊಟ್ಟಿದ್ದೇನೆ. ಮೊದಲನೇ ಪತ್ರಕ್ಕೆ ದಿಃ 28-10-2019ರಂದು ಆ ಪತ್ರಕ್ಕೆ ನಾನು ಉತ್ತರ ಕೊಟ್ಟಿದ್ದೇನೆ. ಎರಡನೇ ಪತ್ರ ಬಂದ 10 ದಿನಗಳ ನಂತರ ಅದಕ್ಕೆ ಉತ್ತರ ಕೊಟ್ಟಿದ್ದೇನೆ. ನಾನು ನೀಡಿದಂತಹ ಉತ್ತರ ಅದರ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಿಪಿ-11ಬಂದ ಮೂರು ದಿನಗಳ ನಂತರ Assistant Labour Commissioner ಕಛೇರಿ, ದಾವಣಗೆರೆಗೆ ಹೋಗಿದ್ದೆ ಅಂದರೆ ನಿಜ. ದಿಃ 06-11-2019 ಮತ್ತು ದಿಃ 09-12-2019ನೇದರ ಪತ್ರಗಳಿಗೆ ನಾನು ನೀಡಿದ ಉತ್ತರಗಳನ್ನು ALC ಗೆ ಹೇಳಿದ್ದೀರಾ ಅಂದರೆ ನಾನು ಆ ದಾಖಲೆಗಳನ್ನು ALC ಕಛೇರಿಗೆ ಕೊಟ್ಟಿದ್ದೇನೆ. ಆ ಉತ್ತರಗಳ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಆ ದಾಖಲೆಗಳು ಯಾವುದು ಅಂದರೆ ದೃಷ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ದಾಖಲೆ, ರೆಟಿನಾ ಟೆಸ್ಟ್ ರಿಪೋರ್ಟ. ಈ ಕೇಸ್ ಹಾಕುವ ಪೂರ್ವದಲ್ಲಿಯೇ ಆ ಉತ್ತರಗಳನ್ನು ಕೊಟ್ಟಿದ್ದೇನೆ. ಮೇಲಿನ ಹೇಳಿದಂತಹ ದೃಷ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ದಾಖಲೆ, ರೆಟಿನಾ ಟೆಸ್ಟ್ ರಿಪೋರ್ಟಗಳೇ ಉತ್ತರ ಇರುತ್ತದೆ, ಸರ್ಕಾರಿ ಆಸ್ಪತ್ರೆಯವರು ನೀಡಿದ certificate ಆ ಎರಡು ಪತ್ರಗಳಿಗೆ ಉತ್ತರ ಇರುತ್ತದೆ. ಸದರಿ ದಾಖಲೆಗಳು/ಪ್ರಮಾಣ ಪತ್ರಗಳು ಆ ಎರಡು ಪತ್ರಕ್ಕೆ ಉತ್ತರ ಇರುವುದಿಲ್ಲ ಅಂದರೆ ಸರಿಯಲ್ಲ. ಆ ಎರಡು ಪತ್ರಗಳಿಗೆ ನಾನು ಉತ್ತರಗಳನ್ನು ನೀಡಿದ್ದೇನೆ ಎನ್ನುವ ದಾಖಲೆಗಳು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ಆ ಎರಡು ಪತ್ರಗಳಿಗೆ

ಉತರ ಕೊಡದೇ ಇದ್ದರೂ ಸಹ ಕೊಟ್ಟಿದ್ದೇನೆ ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆ ಎರಡು ಪ್ರಮಾಣ ಪತ್ರಗಳನ್ನು ನನಗೆ ಅನುಕೂಲವಾಗುವಂತೆ ಈ ಪ್ರಕರಣಕ್ಕೋಸ್ಕರ ಹಾಜರುಪಡಿಸಿದ್ದೇನೆ ಅಂದರೆ ಸುಳ್ಳು.

ನಿಪಿ-20 ನ್ನು ನನಗೆ ಬರೆದುಕೊಟ್ಟಿದ್ದಾರೆ, ಅದನ್ನು ನಾನು ಎದುರುದಾರರ ಕಂಪನಿಗೆ ಕೊಟ್ಟಿದ್ದೇನೆ. ನಿಪಿ-20 ರ ದಾಖಲೆಯನ್ನು ಕೊಡುವ ಕಾಲಕ್ಕೆ ನಾನು ಕೆಲಸದಲ್ಲಿ ಇರಲಿಲ್ಲ. ನಿಪಿ-20 ರಲ್ಲಿ ಎರಡು ಕಣ್ಣುಗಳಿಗೆ ಇರುಳು-ಕುರುಡು ಇದೆ ಅಂತ ಬರೆದಿದೆ ಅಂದರೆ ನಿಜ. ನಿಪಿ-20 ರಲ್ಲಿ ಬರೆದಿರುವ ಅಂಶಗಳು ಸುಳ್ಳು ಅಂದರೆ ಸರಿಯಲ್ಲ. ನಿಪಿ-20 ರ ದಾಖಲೆಯನ್ನು ನನಗೆ ಅನಾನುಕೂಲ ಆಗಬಾರದು ಅಂತ ಈ ಕೇಸ್ ಹಾಕಿದ ನಂತರ ಸೃಷ್ಟಿಸಿಕೊಂಡು ಬಂದು ಹಾಜರುಪಡಿಸಿದ್ದೇನೆ ಅಂದರೆ ಸರಿಯಲ್ಲ. ದಿಃ 13-09-2024 ರಂದು ನಾನು ಕೆಲಸ ಮಾಡುತ್ತಿರಲಿಲ್ಲ.

ದಿಃ 01-07-2019 ರಂದು ಕಂಪನಿಯಿಂದ ನನಗೆ ಒಂದು ಪತ್ರ ಬಂದಿತ್ತು ಅಂದರೆ ನನಗೆ ಆ ಪತ್ರ ತೋರಿಸಿದರೆ ಉತ್ತರ ಹೇಳಲು ಆಗುತ್ತದೆ. ಈಗ ನನಗೆ ತೋರಿಸಿದ ದಾಖಲೆ ನನಗೆ ಎದುರುದಾರರ ಕಂಪನಿಯಿಂದ ನನಗೆ ಬಂದಿಲ್ಲ. ಸಾಕ್ಷಿದಾರರಿಗೆ ತೋರಿಸಿದ ದಾಖಲೆಯನ್ನು ಗುರುತಿಗಾಗಿ Ex.R.1 ಅಂತ ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಈಗ ನನಗೆ ಓದಿ ಹೇಳಿದ ವಿಳಾಸ "ಕೆ. ಬಸವರಾಜ ತಂದೆ ಕರಿಬಸಪ್ಪ, ಮನೆ ನಂಬರ 310, 35 ನೇ ವಾರ್ಡ, ಈಶ್ವರ ನಗರ, ಹೊಸಪೇಟೆ-583201" ನನ್ನದೇ ಇರುತ್ತದೆ. ಈ ವಿಳಾಸಕ್ಕೆ ಪತ್ರ ಕಳುಹಿಸಿದರೆ ನನಗೆ ತಲುಪುತ್ತದೆ. Ex.R.1 ರ ದಾಖಲೆ ನನಗೆ ತಲುಪಿದೆ ಅಂದರೆ ಸುಳ್ಳು. ಆ ಪತ್ರದಲ್ಲಿರುವ ಮಾಹಿತಿ ನನಗೆ ಗೊತ್ತಿದೆ, ಅದು ತಲುಪಿದರೂ ಸಹ ಒಂದಾನುವೇಳೆ ನಾನು ತಲುಪಿದೆ ಅಂತ ಹೇಳಿದರೆ ತೊಂದರೆಯಾಗುತ್ತದೆ ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ನನ್ನ ಸಂಬಳದಲ್ಲಿ ಏನೇನು deduction ಇದೆ ಅಂತ ನನಗೆ ಮಾಹಿತಿ ಇದೆ. Festival advance ಮತ್ತು PF ಮಾತ್ರ ಸಂಬಳದಲ್ಲಿ ಕಡತ ಆಗಿದೆ ಅಂದರೆ ಸರಿಯಲ್ಲ. ಕಂಪನಿಯವರೆ ESI ಗೆ ಕಟ್ಟಿದ್ದಾರೆ ಅಂದರೆ ನಿಜ. ನನಗೆ ಕೆಲಸದಿಂದ ತೆಗೆದು ಹಾಕಿದ ಬಗ್ಗೆ ಪತ್ರ ಏನೂ ಬಂದಿಲ್ಲ. ನನ್ನ ಕಣ್ಣಿಗೆ ಸಂಬಂಧಪಟ್ಟ fitness ದಾಖಲೆಗಳನ್ನು ಕೊಡಬೇಕು ಅಂತ ನಿಪಿ-10 ಮತ್ತು 11 ರಲ್ಲಿ ಕೇಳಿದ್ದರು ಅಂದರೆ ನಿಜ. ನಿಪಿ-10 ಮತ್ತು 11 ರಲ್ಲಿ ಕೇಳಿರುವ ದಾಖಲೆಗಳನ್ನು 2024 ರಲ್ಲಿ ನ್ಯಾಯಾಲಯದಲ್ಲಿ ತಂದು ಕೊಟ್ಟಿದ್ದೇನೆ ಅಂದರೆ ನಿಜ. ನಿಪಿ-10 ಮತ್ತು 11 ರಲ್ಲಿ ಕೇಳಿರುವ ದಾಖಲೆಗಳನ್ನು ಈ ನ್ಯಾಯಾಲಯದಲ್ಲಿ ಆಗಲಿ ಬೇರೆ ಎಲ್ಲಾದರೂ ಆಗಲಿ ನಾನು ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ.

ಈ ಹಂತದಲ್ಲಿ ವಕೀಲರು ಸಮಯ ಕೋರಿರುವುದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.